| | |
|---|---|
| ಪ್ರಾಸಾ | 17 |
| ಚಾಸಾ | 32 |

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ 4
(ಸಿವಿಲ್)

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ**

**ವಿಶೇಷ ಸತ್ರ ಪ್ರಕರಣ ಸಂಖ್ಯೆ: 123/2023**

(1 ನೇ ಆರೋಪಿಯನ್ನು ವಿ.ಸಿ ಮುಖಾಂತರ ವಿಚಾರಣೆಗೆ ಹಾಜರುಪಡಿಸಲಾಗಿದೆ)

**ದಿನಾಂಕ: 03.10.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಜಗದೀಶ್ |
| ತಂದೆ ಹೆಸರು | : | ವೆಂಕಟೇಶ್ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಎಸ್?ಡಿ.ಎ. ನಗರ ಸಭೆ, ಚಿಂತಾಮಣಿ |
| ವಾಸಸ್ಥಳ | : | ಚಿಂತಾಮಣಿ |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

1. ಕಳೆದ ಎರಡು ವರ್ಷಗಳಿಂದ ನಾನು ಚಿಂತಾಮಣಿ ನಗರ ಸಭೆಯಲ್ಲಿ ಎಸ್.ಡಿ.ಎ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿ: 25.08.2023 ರಂದು ರಾತ್ರಿ 8.00-9.00 ಗಂಟೆ ಸಮಯದಲ್ಲಿ ಚಿಂತಾಮಣಿ ಠಾಣೆಗೆ ನಾನು ಹಾಗೂ ಚಾಸಾ-33 ರವರು ಹೋಗಿದ್ದೆವು. ಸದರಿ

| | |
|---|---|
| ಪ್ರಾಸಾ | 17 |
| ಚಾಸಾ | 32 |

ಠಾಣೆಯಲ್ಲಿ ಇಬ್ಬರು ಆರೋಪಿತರಿದ್ದರು, ಸದರಿ ಸಮಯದಲ್ಲಿ ಸದರಿ ಆರೋಪಿತರು ಒಂದು ಜೊತೆ ಹವಾಯಿ ಚಪ್ಪಲಿ ಹಾಗೂ ಇನ್ನೊಂದು ಜೊತೆ ಬೆಲ್ಟ್ ಚಪ್ಪಲಿಯನ್ನು, ವಿವೋ ಕಂಪನಿಯ ಎರಡು ಮೊಬೈಲ್ ಫೋನ್ ನ್ನು ಹಾಜರಿಸಿದ್ದರು. ಸದರಿ ಚಪ್ಪಲಿಗಳನ್ನು ಹಾಗೂ ಫೋನ್ ಗಳನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡಿದ್ದರು. ಸದರಿ ಸ್ಥಳದಲ್ಲಿ 8.00 ರಿಂದ 9.00 ಗಂಟೆ ತನಕ ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ. ಸದರಿ ಮಹಜರ್ ಗೆ ನಾನು ಸಹಿ ಹಾಕಿರುತ್ತೇನೆ. ಸದರಿ ಮಹಜರ್ ನ್ನು, ಪೊಲೀಸರು ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ಹಾಗೂ ಠಾಣೆಯಲ್ಲಿದ್ದ ಇಬ್ಬರು ಅರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಪೊಲೀಸ್ ನೊಟೀಸ್ ಹಾಗೂ ಮಹಜರ್ ನ್ನು ತೋರಿಸಲಾಗಿ ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಪೊಲೀಸ್ ನೊಟೀಸ್ ನ್ನು ನಿಪಿ26 ಎಂದು, ಸಾಕ್ಷಿಯ ಸಹಿಯನ್ನು ನಿಪಿ 26(ಎ) ಎಂದು ಗುರುತಿಸಲಾಯಿತು. ಮಹಜರ್ ನ್ನು ನಿಪಿ27 ಎಂದು ಸಾಕ್ಷಿಯ ಸಹಿಯನ್ನು ನಿಪಿ 27(ಎ) ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಅಭಿಯೋಜಕರು ಪಿ.ಎಫ್ ನಂ: 123/2023 ರಲ್ಲಿ ನಮೂದುಗೊಳಿಸಿದ

| | |
|---|---|
| ಪ್ರಾಸಾ | 17 |
| ಚಾಸಾ | 32 |

ಮೊದಲನೆ ವಿವೋ ಮೊಬೈಲ್ ಫೋನ್ ಎಫ್.ಎಸ್ .ಎಲ್. ನಿಂದ ಬಂದಿಲ್ಲವೆಂದು, ಅದನ್ನು ನ್ಯಾಯಾಲಯದಲ್ಲಿ ಹಾಜರಿಸಿಲ್ಲವೆಂದು ಸಾಕ್ಷಿಯ ಮುಂದುವರೆದ ಮುಖ್ಯವಿಚಾರಣೆಗಾಗಿ ಸಮಯಾವಕಾಶ ಕೋರುತ್ತಾರೆ. ಸದರಿ ಒಂದು ವಿವೋ ಮೊಬೈಲ್ ಫೋನ್ ಅಭಿಯೋಜನೆಯು ಹಾಜರುಪಡಿಸಿಲ್ಲದೆ ಇರುವುದರಿಂದ ಪ್ರಸ್ತುತ ಸಾಕ್ಷಿಯ ಮುಂದುವರೆದ ಮುಖ್ಯವಿಚಾರಣೆಯನ್ನು ಮುಂದೂಡಿದೆ.

**(ದಿನಾಂಕಃ 03.10.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**(ಶಿವಪ್ರಸಾದ್.ಕೆ.ಬಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ**